# ವಾಟ್ಸ್‌ಆ್ಯಪ್ ನಿಯಂತ್ರಣ ಏಕೆ?

ದೇಶದ ಹಲವು ಭಾಗಗಳಲ್ಲಿ ಮಕ್ಕಳ ಕಳ್ಳರೆಂದು ಅಮಾಯಕರನ್ನು ಥಳಿಸುವ ಪ್ರಕರಣಗಳು ನಮ್ಮಲ್ಲಿ ನಡೆಯುತ್ತಿವೆ. ಜತೆಗೇ ಹಲವೆಡೆ ಅಸಹಾಯಕ ಜನರ ಮೇಲೆ ಗುಂಪು ಹಲ್ಲೆಯ ಪ್ರಕರಣಗಳೂ ಹೆಚ್ಚುತ್ತಿವೆ. ಇಂತಹ ಪ್ರಕರಣಗಳಲ್ಲಿ ವಾಟ್ಸ್‌ಆ್ಯಪ್ ನಲ್ಲಿ ಹರಿದಾಡುವ ವದಂತಿಗಳು ಪ್ರಮುಖ ಪಾತ್ರ ವಹಿಸಿವೆ.

ಸ್ಮಾರ್ಟ್‌ಫೋನ್ ಬಳಸುವ ಎಲ್ಲರಿಗೂ ಬಹುತೇಕ ಪರಿಚಿತ ಈ ವಾಟ್ಸ್‌ಆ್ಯಪ್. ದೇಶದಲ್ಲಿ 20 ಕೋಟಿಗೂ ಹೆಚ್ಚು ಜನ ವಾಟ್ಸ್‌ಆ್ಯಪ್ ಬಳಸುತ್ತಿದ್ದಾರೆ. ಬಂದ ಸಂದೇಶವನ್ನು ಹಿಂದೆ ಮುಂದೆ ಯೋಚಿಸದೆ ಕ್ಷಣಮಾತ್ರದಲ್ಲಿ ಫಾರ್ವರ್ಡ್ ಮಾಡುವುದು ಈಗ ಒಂದು ಫ್ಯಾಷನ್ನೇ ಆಗಿದೆ. ಅದೂ ಒಬ್ಬಿಬ್ಬರಿಗಲ್ಲ, ತಮ್ಮ ಬಳಿಯಲ್ಲಿರುವ ಅಷ್ಟೂ ಗುಂಪುಗಳಿಗೆ! ಈ ಹಿನ್ನೆಲೆಯಲ್ಲಿ ಫೇಸ್‌ಬುಕ್ ಮಾಲೀಕತ್ವದ ವಾಟ್ಸ್‌ಆ್ಯಪ್ ಕೆಲವು ಸೌಲಭ್ಯಗಳನ್ನು ಕಡಿತಗೊಳಿಸಲು ನಿರ್ಧರಿಸಿದೆ. 'ಭಾರತದಲ್ಲಿ ಹೆಚ್ಚಿನ ಜನರು ಯೂಡಿಯೋ, ಚಿತ್ರ, ಸಂದೇಶಗಳನ್ನು ಫಾರ್ವರ್ಡ್ ಮಾಡುತ್ತಾರೆ. ಹಾಗಾಗಿ ಐದು ಇತರ ಗುಂಪುಗಳಿಗೆ ಮಾತ್ರ ಒಂದು ಸಂದೇಶವನ್ನು ಫಾರ್ವರ್ಡ್ ಮಾಡುವ ಮಿತಿಯನ್ನು ವಿಧಿಸಲಿದ್ದೇವೆ. ಅದೂ ಭಾರತದ ಒಳಗೆ ಮಾತ್ರ ಈ ಸಂದೇಶ ರವಾನೆ ಆಗಲಿದೆ' ಎಂದು ವಾಟ್ಸ್‌ಆ್ಯಪ್ ಹೇಳಿದೆ. ಜೊತೆಗೆ ಹೊಸ ಫೀಚರ್‌ನಲ್ಲಿ ತಕ್ಷಣವೇ ಸಂದೇಶ ಕಳುಹಿಸುವ 'ಕ್ವಿಕ್ ಫಾರ್ವರ್ಡ್' ಬಟನ್‌ಅನ್ನು ತೆಗೆದು ಹಾಕಲೂ ನಿರ್ಧರಿಸಿದೆ. ಜಾಗತಿಕ ಮಟ್ಟದ ಆವೃತ್ತಿಯಲ್ಲಿ 20 ಇತರ ಗುಂಪುಗಳಿಗೆ ಒಂದು ಸಂದೇಶವನ್ನು ಕಳುಹಿಸುವ ಮಿತಿ ಇರಲಿದೆ.

ವಾಟ್ಸ್‌ಆ್ಯಪ್‌ನ ಈ ನಿರ್ಬಂಧಕ್ಕೆ ಕಾರಣ ಭಾರತದಲ್ಲಿ ಶೀಘ್ರವೇ ಸಾರ್ವತ್ರಿಕ ಚುನಾವಣೆ ನಡೆಯುವುದು ಎನ್ನಲಾಗಿದೆ. ಸಂಸ್ಥೆಯು ಈ ನಿರ್ಬಂಧಗಳ ವಿವರಗಳನ್ನು ದೇಶದ ಚುನಾವಣಾ ಆಯೋಗಕ್ಕೂ ಸಲ್ಲಿಸಿದೆ. ಅಂದರೆ ಚುನಾವಣೆಯ ಸಂದರ್ಭದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸುಳ್ಳು ಸುದ್ದಿಗಳನ್ನು ಹರಡಲಾಗುತ್ತಿದೆ ಎನ್ನುವುದು ಸ್ಪಷ್ಟವಾದಂತೆಯೇ.

ಈ ವಿದ್ಯಮಾನಕ್ಕೆ ಇನ್ನೂ ಹಲವು ಮಗ್ಗುಲುಗಳು ಇವೆ. ದೇಶದ ಹಲವು ಭಾಗಗಳಲ್ಲಿ ಮಕ್ಕಳ ಕಳ್ಳರೆಂದು ಅಮಾಯಕರನ್ನು ಥಳಿಸುವ ಪ್ರಕರಣಗಳು ನಮ್ಮಲ್ಲಿ ನಡೆಯುತ್ತಿವೆ. ಜತೆಗೇ ಹಲವೆಡೆ ಅಸಹಾಯಕ ಜನರ ಮೇಲೆ ಗುಂಪು ಹಲ್ಲೆಯ ಪ್ರಕರಣಗಳೂ ಹೆಚ್ಚುತ್ತಿವೆ. ಇಂತಹ ಪ್ರಕರಣಗಳಲ್ಲಿ ವಾಟ್ಸ್‌ಆ್ಯಪ್ ನಲ್ಲಿ ಹರಿದಾಡುವ ವದಂತಿಗಳು ಪ್ರಮುಖ ಪಾತ್ರ ವಹಿಸಿವೆ.

ಭಾರತದಲ್ಲಿ ಮಾತ್ರ ಈ ವಿದ್ಯಮಾನಗಳು ನಡೆಯುತ್ತಿರುವುದೇಕೆ? ನಮ್ಮ ಸಾರ್ವಜನಿಕ ಜೀವನದಲ್ಲಿ ಇನ್ನೊಬ್ಬರನ್ನು ದ್ವೇಷಿಸುವ ಪ್ರವೃತ್ತಿ ಮಾನ್ಯತೆ ಪಡೆದುಕೊಳ್ಳುತ್ತಿದೆಯೆ? ಹಿಂದಿನ ಕಾಲದಲ್ಲಿ ಊರಿಗೆ ಅಥವಾ ಮನೆಯ ಬಳಿಗೆ ಅಪರಿಚಿತರು ಯಾರೇ ಬಂದರೂ ಅವರನ್ನು ವಿಚಾರಿಸಿ ಬೆಲ್ಲ, ನೀರು ಕೊಡುತ್ತಿದ್ದ ಸಂಸ್ಕೃತಿ ನಮ್ಮದು. ಬಂದವನು ಬದುಕಿನಲ್ಲಿ ನೊಂದವನಾಗಿದ್ದರೆ, ಜನ ಗುಂಪು ಸೇರಿ ಸಹಾಯವನ್ನೂ ಮಾಡುತ್ತಿದ್ದರು. ಆದರೆ ಈಗ ಅಪರಿಚಿತರು ಕಂಡರೆ, ಅವರ ಪೂರ್ವಾಪರವನ್ನೂ ವಿಚಾರಿಸದೆ ಮಕ್ಕಳ ಕಳ್ಳರು ಎಂದು ಕ್ಷಣಮಾತ್ರದಲ್ಲಿ ನಿರ್ಧರಿಸುವಷ್ಟು ನಮ್ಮ ಜನರು ಬದಲಾಗಿರುವುದೇಕೆ? ಕಳೆದ ಏಳು ತಿಂಗಳಲ್ಲಿ ಹೀಗೆ ಜನರು ಗುಂಪುಗೂಡಿ ಅಪರಿಚಿತರನ್ನು ಬಡಿದು ಕೊಂದ ಏಳು ಪ್ರಕರಣಗಳು ವರದಿ ಆಗಿವೆ. ಇನ್ನಷ್ಟು ಪ್ರಕರಣಗಳಲ್ಲಿ ಏಟು ತಿಂದ ಅಪರಿಚಿತರು ಹೇಗೋ ಜೀವ ಉಳಿಸಿಕೊಂಡಿದ್ದಾರೆ.

ಚುನಾವಣೆಯ ಸಂದರ್ಭದಲ್ಲಿ ಸುಳ್ಳುಸುದ್ದಿ, ಉದ್ರೇಕಿಸುವ ಮಾಹಿತಿಗಳನ್ನು ತಡೆಯಬೇಕು ಎನ್ನುವ ಆಯೋಗದ ಉದ್ದೇಶ ಒಳ್ಳೆಯದೇ. ಆದರೆ ಇದು ಕೇವಲ ವಾಟ್ಸ್‌ಆ್ಯಪ್‌ನಿಂದ ಉಂಟಾಗುತ್ತಿರುವ ಪ್ರಚೋದನೆ ಮಾತ್ರವಲ್ಲ. ಸುಳ್ಳು ಸುದ್ದಿಗಳನ್ನು ನೇರವಾಗಿ ಹರಡುವವರ ಸಂಖ್ಯೆಯೂ ದೊಡ್ಡದಿದೆ. ಸುಳ್ಳು ಸುದ್ದಿಗಳ ಮೇಲೆ ದೇಶದ ಜನರ ಅಭಿಪ್ರಾಯಗಳನ್ನು ರೂಪಿಸುವಂತಹ ಚರ್ಚಾ ಕಾರ್ಯಕ್ರಮಗಳು ಸಮೂಹ ಮಾಧ್ಯಮಗಳಲ್ಲೂ ನಡೆಯುತ್ತಿವೆ. ಅವುಗಳ ನಿಯಂತ್ರಣದ ಬಗ್ಗೆ ಏನು ಕ್ರಮ ಕೈಗೊಂಡಿದ್ದೇವೆ? ನಮ್ಮ ಟಿವಿಗಳಲ್ಲಿ ಬರುವ ಕ್ರೈಮ್‌ಸ್ಟೋರಿಗಳನ್ನು ಗಮನಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಭಾಷೆ ಮತ್ತು ಮಾಹಿತಿಯ ಕುರಿತು ಯಾವುದೇ ನಿಯಂತ್ರಣವಿಲ್ಲದೆ ಕ್ರೈಮ್ ಸುದ್ದಿಗಳನ್ನು ವಿಜೃಂಭಿಸಿ, ಮಸಾಲೆ ಹಚ್ಚಿ ವರದಿ ಮಾಡುವ ವ್ಯವಸ್ಥೆ ನಮ್ಮಲ್ಲಿ ಶುರುವಾಗಿ ಬಹಳ ವರ್ಷಗಳೇ ಕಳೆದಿವೆ.

ಮಾಹಿತಿಗಳನ್ನು, ಸುದ್ದಿಗಳನ್ನು ಹಂಚಿಕೊಳ್ಳುವುದು ಪ್ರಜಾಪ್ರಭುತ್ವದ ಲಕ್ಷಣಗಳಲ್ಲಿ ಒಂದು. ಕೆಲವು ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಸಾಕಷ್ಟು ಮಹತ್ವದ ಚರ್ಚೆಗಳು ನಡೆಯುತ್ತವೆ. ರಚನಾತ್ಮಕ ಕೆಲಸಗಳಿಗೆ ಈ ಆ್ಯಪ್ ಬಳಸುವವರೂ ಸಾಕಷ್ಟಿದ್ದಾರೆ. ನಿರ್ಬಂಧಗಳು ಅವರ ಮೇಲೂ ಪರಿಣಾಮ ಬೀರುತ್ತವೆ. ಸುಳ್ಳು ಸುದ್ದಿಗಳನ್ನು ದುರುದ್ದೇಶದಿಂದ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಆ ನಿಟ್ಟಿನಲ್ಲಿ ಸೈಬರ್ ಕಾಯ್ದೆಯನ್ನು ಬಲಪಡಿಸುವುದು ಹೇಗೆ ಎನ್ನುವುದನ್ನು ಯೋಚಿಸಬೇಕಿದೆ. ವಾಟ್ಸ್‌ಆ್ಯಪ್ ನಿರ್ಬಂಧದ ಮೂಲಕವಷ್ಟೇ ಈ ಸಮಸ್ಯೆಯನ್ನು ಬಗೆಹರಿಸಲಾಗದು. ಸೈಬರ್ ಕಾಯ್ದೆಯನ್ನು ಬಲಗೊಳಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಮೊದಲು ಆಗಬೇಕಾದ ಕೆಲಸ.

■ ಬಿ.ಎಂ.ಹನೀಫ್



ಈಶ್ವರ್